**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ–248/2019**

ಪಿ.ಡಬ್ಲ್ಯೂಃ– 3
ಸಿ.ಡಬ್ಲ್ಯೂಃ– 3

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶಾರದಮ್ಮ |
| ಗಂಡನ ಹೆಸರುಃ | : | ಪುಟ್ಟರಾಜು |
| ವಯಸ್ಸುಃ | : | 56 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಮಧುರನಹಳ್ಳಿ ಗ್ರಾಮ, ಅರಕಲಗೂಡು ತಾಃ. |

**ದಿನಾಂಕಃ 04–12–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತ ಗೊತ್ತು. ಆರೋಪಿತ ನನ್ನ ಸಂಬಂಧಿ. ಆರೋಪಿ ನನ್ನ ಭಾವನ ಮಗ. ಚಾಸಾ–4 ಮಣಿಯಮ್ಮ, ಚಾಸಾ–5 ದೇವಮ್ಮ, ಚಾಸಾ–6 ರಾಜಯ್ಯ ನನಗೆ ಗೊತ್ತು. ಅವರು ನಮ್ಮ ಮನೆಯ ಪಕ್ಕದ ಮನೆಯ ವಾಸಿಗಳು. ಆರೋಪಿತನ ಮನೆ ನಮ್ಮ ಮನೆಯ ಪಕ್ಕದಲ್ಲಿಯೇ ಇರುತ್ತದೆ. ಆರೋಪಿತನ ಪತ್ನಿಯ ಹೆಸರು ಶೃತಿ ಎಂದಾಗಿದ್ದು ಆಕೆ ಆರು ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಆರೋಪಿತನ ಪತ್ನಿ ಶೃತಿ ಆಕೆಯ ಮೈಮೇಲೆ ಸೀಮೆಎಣ್ಣೆ ಹಾಕಿಕೊಂಡು ಮೃತಪಟ್ಟಿರುತ್ತಾಳೆ. ಆರೋಪಿ ಹಾಗೂ ಆತನ ಪತ್ನಿ ಮನೆಯಿಂದ ಜಗಳ ಆಡುತ್ತಾ ಹೊರಬಂದಿದ್ದು ಆರೋಪಿತನ ಪತ್ನಿ ಶೃತಿಯ

ಮೈಗೆ ಬೆಂಕಿ ಹತ್ತಿಕೊಂಡಿತ್ತು ಎಂದು ಊರಿನವರು ನನಗೆ ತಿಳಿಸಿರುತ್ತಾರೆ. ಯಾವ ಕಾರಣಕ್ಕಾಗಿ ಶೃತಿಯ ಮೈಗೆ ಬೆಂಕಿ ಹತ್ತಿಕೊಂಡಿರುತ್ತದೆ ಎಂದು ನನಗೆ ತಿಳಿದಿಲ್ಲ. ಶೃತಿಗೆ ಬೆಂಕಿ ಹತ್ತಿಕೊಂಡ ಕಾಲದಲ್ಲಿ ನಾನು ನಮ್ಮ ಮನೆಯಲ್ಲಿ ಇರಲಿಲ್ಲ ನಾನು ಕೆ ಆರ್ ನಗರಕ್ಕೆ ಮದುವೆಗೆ ಹೋಗಿದ್ದೆ. ಈಗ ನೋಡುತ್ತಿರುವ ಮಹಜರಿನಲ್ಲಿರುವ ಸಹಿ ನನ್ನದು. ಸಾಕ್ಷಿದಾರರು ಗುರುತಿಸಿದ ಮಹಜರನ್ನು ನಿಪಿ–3 ಎಂದು ಗುರುತಿಸಲಾಯಿತು. ನಿಪಿ–3 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–3 ಮಹಜರನ್ನು ಪೊಲೀಸರು ಶೃತಿಯ ಸಾವಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಶೃತಿಯ ಮನೆಯ ಬಳಿ ಬಂದಾಗ ಹಾಜರಿದ್ದು ನನ್ನ ಸಹಿ ಮಾಡಿರುತ್ತೇನೆ. ನಾನು ಮಹಜರಿಗೆ ಸಹಿ ಮಾಡಿದ ಕಾಲದಲ್ಲಿ ಸಾಕ್ಷಿದಾರರಾಗಿ ಸುರೇಶ ಹಾಗೂ ಶ್ರೀನಿವಾಸರವರು ಸಹ ಹಾಜರಿದ್ದರು. ಈಗ ನೋಡುತ್ತಿರುವ ಫೋಟೋವನ್ನು ಪೊಲೀಸರು ನಿಪಿ–3 ಮಹಜರ್ ಕಾಲದಲ್ಲಿ ತೆಗೆದಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ–4 ಎಂದು ಗುರುತಿಸಲಾಯಿತು. ನಿಪಿ–4 ರಲ್ಲಿ ಸಾಕ್ಷಿದಾರರು ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಈಗ ನೋಡುತ್ತಿರುವ ಎರಡು ಫೋಟೋಗಳು ಶೃತಿ ವಾಸವಾಗಿದ್ದ ಮನೆಯ ಫೋಟೋಗಳು ಆಗಿರುತ್ತವೆ. ಸಾಕ್ಷಿದಾರರು ಗುರುತಿಸಿದ ಎರಡು ಫೋಟೋಗಳನ್ನು ಕ್ರಮವಾಗಿ ನಿಪಿ–5 ಹಾಗೂ 6 ಎಂದು ಗುರುತಿಸಲಾಯಿತು. ನಿಪಿ–3 ಮಹಜರ್ ಸಮಯದಲ್ಲಿ ಒಂದು ಸೀಮೆ ಎಣ್ಣೆ ಇದ್ದ ಬಣ್ಣದ ಡಬ್ಬ ಹಾಗೂ ಒಂದು ಬಣ್ಣದ ಡಬ್ಬಿಯನ್ನು ಪೊಲೀಸರು ತೆಗೆದುಕೊಂಡರು ಎಂದು ನನಗೆ ತಿಳಿದು ಬಂತು. ಸೀಲು ಮಾಡಲಾಗಿರುವ ಎರಡು ಬಟ್ಟೆಯ ಚೀಲಗಳನ್ನು ತೆರೆಯಲಾಯಿತು. ಅದರಲ್ಲಿರುವ

ಒಂದು ಪೆಯಿಂಟ್‌ನ ಡಬ್ಬವನ್ನು ಗುರುತಿಸಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಪೆಯಿಂಟ್ ನ ಖಾಲಿ ಡಬ್ಬವನ್ನು ಮುಮಾ-1 ಎಂದು ಗುರುತಿಸಲಾಯಿತು. ಮುಮಾ-1 ಪೆಯಿಂಟ್ ನ ಖಾಲಿ ಡಬ್ಬವನ್ನು ಮಹಜರ್ ಕಾಲದಲ್ಲಿ ಪೊಲೀಸರು ತೆಗೆದುಕೊಂಡು ಹೋದರು ಎಂದು ನನಗೆ ತಿಳಿದು ಬಂತು. ಸೀಲು ಮಾಡಲಾಗಿರುವ ಮತ್ತೊಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ಒಂದು ಚಿಕ್ಕ ಪೆಯಿಂಟ್ ಡಬ್ಬಿ ಹಾಗೂ ಮರದ ಕಡ್ಡಿಯನ್ನು ಸಾಕ್ಷಿದಾರರು ಗುರುತಿಸಿರುವುದಿಲ್ಲ. ಸೀಲು ಮಾಡಲಾಗಿರುವ ಮತ್ತೊಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ಕಡ್ಡಿ ಇರುವ ಒಂದು ಬೆಂಕಿಪೊಟ್ಟಣವನ್ನು ಸಾಕ್ಷಿದಾರರು ಗುರುತಿಸಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾನು ಪೊಲೀಸರಲ್ಲಿ ಘಟನೆ ನಡೆದ ಕಾಲದಲ್ಲಿ ನಾನು ನಮ್ಮ ಮನೆಯಲ್ಲಿರಲಿಲ್ಲ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ. ಶೃತಿ ರವರ ದೇಹಕ್ಕೆ ಬೆಂಕಿ ಬಿದ್ದ ಆರು ದಿನಗಳ ನಂತರ ಆಕೆ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಮೃತಪಟ್ಟರು. ಶೃತಿ ರವರ ಸಾವಿಗೆ ಯಾರು ಕಾರಣರು ಎಂದು ಹಾಗೂ ಆಕೆಯ ದೇಹಕ್ಕೆ ಹೇಗೆ ಬೆಂಕಿ ಬಿದ್ದಿರುತ್ತದೆ ಎಂದು ನನಗೆ ತಿಳಿದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:**

2. ಆರೋಪಿತ ರವಿ ನನ್ನ ಗಂಡನ ಅಣ್ಣನಾದ ಜವರಯ್ಯನವರ ಕಿರಿಯ ಮಗ ಎಂದರೆ ಸರಿ. ದಿ:28.03.2019ರ ರಾತ್ರಿ 9 ಗಂಟೆ ಸಮಯದಲ್ಲಿ ನಾನು ನಮ್ಮ

ಮನೆಯಲ್ಲಿದ್ದಾಗ ನಮ್ಮ ಮನೆಯ ಪಕ್ಕದ ಮನೆಯ ವಾಸಿಯಾದ ಆರೋಪಿ ರವಿ ರವರ ಪತ್ನಿಯಾದ ಶೃತಿ ರವರು ಅವರ ಮನೆಯ ಮುಂದಿನ ಬಾಗಿಲ ಬಳಿ ಬಿಳಿ ಬಣ್ಣದಿಂದ ರಂಗೋಲಿ ಹಾಕುತ್ತಿದ್ದಳು ಎಂದರೆ ನನಗೆ ತಿಳಿದಿಲ್ಲ. ಸ್ವಲ್ಪ ಸಮಯದ ನಂತರ ರವಿ ಆತನ ಮನೆಯಲ್ಲಿ ಆತನ ಹೆಂಡತಿ ಶೃತಿಯೊಂದಿಗೆ ಆಕೆ ಊಟ ಕೊಡಲಿಲ್ಲ ಎನ್ನುವ ವಿಚಾರದಲ್ಲಿ ಜಗಳವಾಡುತ್ತಾ ಹೊಸ ಬಟ್ಟೆ ತೆಗೆದುಕೊಂಡು ಹಣವೆಲ್ಲಾ ಜಾಸ್ತಿ ಖರ್ಚು ಮಾಡಿದ್ದೀಯಾ ದುಡ್ಡನ್ನು ಯಾರು ನಿನ್ನ ಅಪ್ಪ ಅಮ್ಮ ಕೊಡುತ್ತಾರ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ನಾನು ಗಂಡ ಹೆಂಡತಿ ಜಗಳ ಸ್ವಲ್ಪ ಸಮಯದ ನಂತರ ಸುಮ್ಮನಾಗುತ್ತಾರೆ ಎಂದು ಸುಮ್ಮನಿದ್ದೆವು ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ಶೃತಿಯು ಆಕೆಯ ಮನೆ ಒಳಗಡೆಯಿಂದ ಕಿರುಚಾಡಿಕೊಂಡು ಮನೆಯ ಹೊರಗೆ ಓಡಿ ಬಂದಿದ್ದು ಆಗ ನಾನು,  ಮಣಿಯಮ್ಮ, ರಾಜಯ್ಯ ಹಾಗೂ ಶೃತಿಯ ಅತ್ತೆ ದೇವಮ್ಮ ಹಾಗೂ ಇತರರು ನಮ್ಮ ಮನೆಗಳಿಂದ ಹೊರಗಡೆ ಬಂದು ನೋಡಲಾಗಿ ಶೃತಿಯ ನೈಟಿಗೆ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದು ನಾವೆಲ್ಲಾ ಸೇರಿ ಶೃತಿಯ ಮೈಮೇಲೆ ನೀರು ಸುರಿದು ಬೆಂಕಿ ನಂದಿಸಿದೆವು ಎಂದರೆ ಸರಿಯಲ್ಲ. ಶೃತಿಯ ಮೈಗೆ ಬೆಂಕಿ ಹತ್ತಿಕೊಂಡಿದ್ದ ಬಗ್ಗೆ ಆಕೆಯನ್ನು ಕೇಳಲಾಗಿ ಆಕೆಯ ಗಂಡ ರವಿ ಊಟ ನೀಡುವಂತೆ ಕೇಳಿದ್ದು ಶೃತಿಯ ಕೈಗೆ ಸೀಮೇಣ್ಣೆ ಆಗಿದ್ದ ಕಾರಣದಿಂದ ಕೈ ತೊಳೊಕೊಂಡು ಸ್ವಲ್ಪ ಹೊತ್ತಿನ ನಂತರ ಊಟ ಬಡಿಸುತ್ತೇನೆಂದು ಆಕೆ ಹೇಳಿದಾಗ ಆಕೆ ಗಂಡನಾದ ರವಿ ಈ ಹಿಂದೆ ಜಾಸ್ತಿ ದುಡ್ಡಿನ ಬಟ್ಟೆ ತೆಗೆದುಕೊಂಡ ವಿಚಾರದಲ್ಲಿ ಜಗಳ ತೆಗೆದು ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಿದ್ದೀಯಾ ಇದನ್ನೆಲ್ಲಾ ನಿನ್ನ ಅಪ್ಪ ಅಮ್ಮ ಕೊಡುತ್ತಾರಾ ಎಂದು ಶೃತಿಗೆ ಬೈದು

ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆ ಬಣ್ಣಕ್ಕೆ ಹಾಕಿಕೊಳ್ಳಲೆಂದು ಇಟ್ಟುಕೊಂಡಿದ್ದ ಸೀಮೆಎಣ್ಣೆ ಡಬ್ಬವನ್ನು ತಗೆದುಕೊಂಡು ಅದರಲ್ಲಿದ್ದ ಸೀಮೆಎಣ್ಣೆಯನ್ನು ಶೃತಿಯ ಮೈಮೇಲೆ ಸುರಿದು ಬೆಂಕಿಕಡ್ಡಿ ಗೀರಿ ಬೆಂಕಿಯನ್ನು ಹಚ್ಚಿದ ಬಗ್ಗೆ ಶೃತಿ ನಮಗೆ ತಿಳಿಸಿದಳು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಶೃತಿಯನ್ನು ಅಕೆಯ ಗಂಡ ರವಿ, ಅತ್ತೆ ದೇವಮ್ಮ ಹಾಗೂ ಮಣಿಯಮ್ಮರವರು ಸ್ಥಳಕ್ಕೆ ಬಂದ ಆಂಬುಲೆನ್ಸಿನಲ್ಲಿ ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದರು ಎಂದರೆ ಈ ಬಗ್ಗೆ ನನಗೆ ತಿಳಿದು ಬಂತು. ಶೃತಿಯ ಸಾವಿಗೆ ಸಂಬಂಧಿಸಿದಂತೆ ಕೊಣನೂರು ಪೊಲೀಸರು ಶೃತಿಯ ಮನೆಯ ಬಳಿ ಬಂದು ನಿಪಿ-3 ಮಹಜರನ್ನು ತಯಾರಿಸಿದಾಗ ನಾನು ಹಾಜರಿದ್ದು ನನ್ನ ಸಹಿ ಮಾಡಿರುತ್ತೇನೆಂದರೆ ಸರಿ. ನಿಪಿ-3 ಮಹಜರ್ ಕಾಲದಲ್ಲಿ ಪೊಲೀಸರು ಒಂದು ಬಿಳಿ ಬಣ್ಣದ ಮುಚ್ಚಳ ಇರುವ ಸೀಮೆಎಣ್ಣೆ ಇದ್ದ ಪ್ಲಾಸ್ಟಿಕ್ ಡಬ್ಬ, ರಂಗೋಲಿ ಬಿಡಿಸಲು ಮಾಡಿಕೊಂಡಿರುವ ಮರದ ಕಡ್ಡಿ, ಬಿಳಿ ಬಣ್ಣದ ಚಿಕ್ಕ ಬಣ್ಣದ ಡಬ್ಬಿ ಹಾಗೂ ಬೆಂಕಿ ಪೊಟ್ಟಣವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಹೌದು ಈ ಬಗ್ಗೆ ನನಗೆ ತಿಳಿದು ಬಂತು ಎಂದು ಸಾಕ್ಷಿದಾರರು ಉತ್ತರಿಸಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ನಾನು ಪ್ರತ್ಯಕ್ಷ ಸಾಕ್ಷಿ ಆಗಿದ್ದ ಬಗ್ಗೆ ಪೊಲೀಸರಲ್ಲಿ ಈಗ ನನಗೆ ಓದಿ ಹೇಳಲಾದಂತೆ "ದಿ:28.03.2019 ರಂದು --------------- ನನ್ನ ಹೇಳಿಕೆ ನೀಡಿರುತ್ತೇನೆ" ಎಂದು ನಿಪಿ-7 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಲಾದಂತೆ "ನಾನು ದಿ:29.03.2019 ರಂದು --------------- ನನ್ನ ಮುಂದುವರಿದ ಹೇಳಿಕೆ ನೀಡಿರುತ್ತೇನೆ" ಎಂದು ನಿಪಿ-8 ರಂತೆ ನನ್ನ ಮುಂದುವರಿದ ಹೇಳಿಕೆಯನ್ನು

ನೀಡಿರುತ್ತೇನೆಂದರೆ ಸರಿಯಲ್ಲ. ಘಟನೆಯ ಪ್ರತ್ಯಕ್ಷ ಸಾಕ್ಷಿ ಆಗಿದ್ದರೂ ಸಹ ಘಟನೆಯ ಪ್ರತ್ಯಕ್ಷ ಸಾಕ್ಷಿ ಆಗಿರುವ ಬಗ್ಗೆ ಪೊಲೀಸರಲ್ಲಿ ನನ್ನ ಹೇಳಿಕೆ ಹಾಗೂ ಮುಂದುವರಿದ ಹೇಳಿಕೆ ನೀಡಿದ್ದರೂ ಸಹ ಆರೋಪಿತ ನನ್ನ ಗಂಡನ ಅಣ್ಣನ ಮಗನಾಗಿರುವ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

3. ಆರೋಪಿ ರವಿ ಹಾಗೂ ಆತನ ಪತ್ನಿ ಶೃತಿ ರವರು ಅವರ ಮನೆಯಲ್ಲಿ ಹೇಗಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಶೃತಿ ಆಕೆಯ ಮನೆಯಿಂದ ಹೊರಬಂದಾಗ ಆಕೆಯ ಬಟ್ಟೆಗೆ ಬೆಂಕಿ ಹತ್ತಿಕೊಂಡಿತ್ತು ಎನ್ನುವ ಬಗ್ಗೆ ನನಗೆ ಗ್ರಾಮದವರು ತಿಳಿಸಿದ್ದು ಅವರ ಹೆಸರು ನನಗೆ ತಿಳಿದಿಲ್ಲ. ಶೃತಿಯ ಮೈಗೆ ಬೆಂಕಿ ಹತ್ತಿಕೊಂಡಿದ್ದ ಬಗ್ಗೆ ಗ್ರಾಮಸ್ಥರು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನಿಪಿ–3 ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಘಟನೆಯ 7–8 ದಿನಗಳ ನಂತರ ಪೊಲೀಸರು ನಿಪಿ–3 ಮಹಜರನ್ನು ತಯಾರಿಸಿದಾಗ ನಾನು ನನ್ನ ಸಹಿ ಮಾಡಿರುತ್ತೇನೆ. ನಿಪಿ–3 ಮಹಜರಿನಲ್ಲಿ ಏನು ಬರೆದಿದೆ ಎಂಬುದು ನನಗೆ ತಿಳಿದಿಲ್ಲ ಎಂದರೆ ಸರಿ. ನಿಪಿ–4 ಫೋಟೋವಿನಲ್ಲಿ ನಾನು ಕಂಡು ಬರುವುದಿಲ್ಲ ಎಂದರೆ ಸರಿ. ಮುಮಾ–1 ಬಣ್ಣದ ಡಬ್ಬ ಇದ್ದ ಬಿಳಿಯ ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ನನ್ನ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ಮೇಲೆ ಕಾಣಿಸಿದ ಗುರುತಿನ ಚೀಟಿಯಲ್ಲಿ ಬೇರೆ ಯಾವ ಸಾಕ್ಷಿದಾರರು ಸಾಕ್ಷಿ ರುಜು ಹಾಕಿರುತ್ತಾರೆಂದು ನನಗೆ ತಿಳಿದಿಲ್ಲ. ನಿಪಿ–3 ಮಹಜರಿಗೆ ನನ್ನ ಜೊತೆ ಸಹಿ ಮಾಡಿದ ಬೇರೆ

ಸಾಕ್ಷಿದಾರರು ಯಾರು ಎಂಬುದು ಎಂದು ನನಗೆ ತಿಳಿದಿದೆ. ನಿಪಿ–3 ಮಹಜರ್ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ನಿಪಿ–3 ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ನಾನು ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.